**ಪ್ರಮಾಣೀಕರಿಸಲಾದ ದಿನಾಂಕ : 14.01.2026.**

**<u>ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. H.L ವಕೀಲರಿಂದ</u> :-**

ನಾನು ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಸುಮಾರು 10 ವರ್ಷಗಳಿಂದ ಸಂಘಕ್ಕೆ ಸೇವೆಯನ್ನು ಸಲ್ಲಿಸುತ್ತಿದ್ದೇನೆ ಎಂದರೆ ಸರಿ. ನನ್ನ ತಂದೆಯವರಾದ ನಂಜುಂಡಪ್ಪನವರು Class-I ಗುತ್ತಿಗೆದಾರರಾಗಿದ್ದರು ಎಂದರೆ ಸರಿ. ನಾನು ಸಹ electrical Class-I ಗುತ್ತಿಗೆದಾರನಾಗಿದ್ದೆ ಎಂದರೆ ಸರಿ. ನಾನು ಪ್ರತಿವಾದಿಯರ ಮೇಲೆ ಈ ದಾವೆಯನ್ನು ಸೇರಿಸಿಕೊಂಡು ಒಟ್ಟು ಎರಡು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿ. ಯಾವ ಆಸ್ತಿಯ 3 ಐಟಂನ ಆಸ್ತಿಗಳ ಪೈಕಿ ಯಾವ ಸರ್ವೆ ನಂಬರಿನಲ್ಲಿ ನನಗೆ ಸೇರಿದ R.C.C ಮನೆ ಇದೆ ಎಂಬುದು ನನಗೆ ತಿಳಿದಿಲ್ಲ. ದಾವಾ ಆಸ್ತಿಯ ಐಟಂ ನಂಬರ್ಃ 3 ನನ್ನ ತಂದೆಯಿಂದ ನನ್ನ ತಾಯಿಯ ಹೆಸರಿಗೆ ಬಂದಿರುತ್ತದೆ. ನಾನು ದಾವೆಯನ್ನು ಹೂಡಿದಂತಹ ಸಮಯದಲ್ಲಿ ಅದು ನನ್ನ ತಂದೆಯ ಹೆಸರಿನಲ್ಲಿ ಇತ್ತು. ಐಟಂ ನಂಬರ್ಃ 2 ನೇ ಸ್ವತ್ತು ನನ್ನ ಚಿಕ್ಕಪ್ಪನಾದ ಶಿವಕುಮಾರ್ ರವರ ಹೆಸರಿನಲ್ಲಿ ಖಾತಾ ಪಹಣಿಯು ಬರುತ್ತಿದೆ ಎಂದರೆ ಸರಿ. ನನ್ನ ತಂದೆಯಾದ ನನ್ನ ಚಿಕ್ಕಪ್ಪನವರು ಕುಟುಂಬದ ಆಸ್ತಿಯನ್ನು ಭಾಗಾಂಶ ಮಾಡಿಕೊಂಡಿರುತ್ತಾರೆ, ಆದರೂ ಸಹ ನಾವು ಒಟ್ಟಿಗೆ ಇರುತ್ತೇವೆ ಎಂದು ನುಡಿಯುತ್ತಾರೆ. ಸದರಿ ವಿಭಾಗವು ಪಂಚಾಯಿತಿ ಪಾರೀಕತ್ತು ಇಲ್ಲವೋ ಎಂಬುದು ನನಗೆ ತಿಳಿದಿಲ್ಲ. ನನ್ನ ತಂದೆ ಹಾಗೂ ಚಿಕ್ಕಪ್ಪನವರು ಈಗಾಗಲೇ ಭಾಗಾಂಶವನ್ನು ಮಾಡಿಕೊಂಡು ಅವರವರ ಹಿಸ್ಸೆಗೆ ಬಂದಂತಹ ಆಸ್ತಿಯಲ್ಲಿ ಬೇರೆ ಬೇರೆ ವಾಸ ಇದ್ದಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ತಿಪಟೂರಿನ ಸ್ಟೆಲ್ಲಾ ಮೇರೀಸ್ ಕಾಂಪೌಂಡಿನ ಪಕ್ಕದಲ್ಲಿ ವಾಸವಿದ್ದೇನೆ ಎಂದರೆ ಸರಿ. ನಾನು ಯಾವಾಗಲೂ ನಮ್ಮ ಊರಿಗೆ ಹೋಗಿ ಬರುತ್ತಿರುತ್ತೇನೆ. ಇಂದಿಗೂ ಕೂಡ ಶಿವಕುಮಾರ್ ರವರ ಹೆಸರಿನಲ್ಲಿ ಖಾತಾ ಪಹಣಿಯು ಬರುತ್ತಿದೆ ಎಂದರೆ ಸರಿ. ಅವರು ಜೀವಂತವಾಗಿದ್ದಾರೆ ಹಾಗೂ ಆರೋಗ್ಯವಾಗಿರುತ್ತಾರೆ. ಅವರ ಹೆಸರಿನಲ್ಲಿ ಖಾತಾ ಪಹಣಿಯು ಬರುತ್ತಿದ್ದು ಅವರನ್ನು ಸೇರಿಸಿಕೊಂಡು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡುವುದಕ್ಕೆ ನನಗೆ ಯಾವುದೇ ತೊಂದರೆ ಇರಲಿಲ್ಲ. ದಾವಾ ಆಸ್ತಿಯ ಐಟಂ ನಂಬರ್ಃ 1 ರಿಂದ 3 ಸ್ವತ್ತುಗಳು ಒಂದಕ್ಕೊಂದು ಅಂಟಿಕೊಂಡಂತೆ ಇರುತ್ತದೆ. ನಮ್ಮ ವಾಸದ ಮನೆಯ ಪಕ್ಕದಲ್ಲಿ ಜಮೀನು ಇದ್ದು ಅದರ ಪಕ್ಕದಲ್ಲಿ ಪ್ರತಿವಾದಿಯ ಆಸ್ತಿ ಬರುತ್ತದೆ. ನಮ್ಮ ವಾಸದ ಮನೆಯ ಪಕ್ಕದಲ್ಲಿರುವ ಜಮೀನಿನ ಸರ್ವೆ ನಂಬರ್ಃ 6/6ಎ ಅಥವಾ 6/6ಬಿ ಇರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂಬರ್ಃ 6/7 ಪ್ರತಿವಾದಿಯರಿಗೆ ಸೇರಿದ ಆಸ್ತಿಯಾಗಿದ್ದು ಅದರ ಒಟ್ಟು ವಿಸ್ತೀರ್ಣ 30 ಗುಂಟೆ ಇರುತ್ತದೆ

ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಸದರಿ ಸರ್ವೆ ನಂಬರ್‌ಃ 6/7 ರ ಪಹಣಿ ತೋರಿಸಿದ್ದು ಅದರಲ್ಲಿನ ವಿಸ್ತೀರ್ಣ ಸರಿಯೋ ತಪ್ಪೋ ಎಂದು ಕೇಳಿದಾಗ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ದಾವಾ ಆಸ್ತಿಯ ಮೂರು ಐಟಂನ ಆಸ್ತಿಗಳಿಗೂ ನಾನು ತಂತಿ ಬೇಲಿಯನ್ನು ಹಾಕಿಸಿರುತ್ತೇನೆ. ಅದನ್ನು ತೋರಿಸುವುದಕ್ಕೆ ನಾನು ಅದಕ್ಕೆ ಸಂಬಂಧಪಟ್ಟ ಭಾವಚಿತ್ರಗಳನ್ನು ನ್ಯಾಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಸರ್ವೆ ನಂಬರ್‌ಃ 6/7 ನಮ್ಮ ಮೂರು ಸ್ವತ್ತುಗಳ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದು ನುಡಿಯುತ್ತಾರೆ. ನನ್ನ ವಾಸದ ಮನೆಯ R.C.C ಕಟ್ಟಡಕ್ಕೆ ಸಂಬಂಧಪಟ್ಟಿರುವ ಹಾಗೇ ನಾನು ಕಾಂಪೌಂಡ್ ನ್ನು ರಸ್ತೆಯ ಪಶ್ಚಿಮ ದಿಕ್ಕಿನಲ್ಲಿರುವ ರಸ್ತೆಯ ಕಡೆಗೆ ಕಾಂಪೌಂಡ್ ನ್ನು ಹಾಕಿರುತ್ತೇನೆ. ಆದರೆ ಉಳಿದ ದಿಕ್ಕಿಗೆ ಕಾಂಪೌಂಡ್ ನ್ನು ಹಾಕಿರುವುದಿಲ್ಲ. ಸದರಿ R.C.C ಕಟ್ಟಡಕ್ಕೆ ಹೊಂದಿಕೊಂಡಂತೆ ಪ್ರತಿವಾದಿಯ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿಗೆ ನಾನು ಸೇರಿಸಿಕೊಂಡು ತಂತಿ ಬೇಲಿಯನ್ನು ಹಾಕಿಕೊಳ್ಳಲು ಹೋದಂತಹ ಸಮಯದಲ್ಲಿ ಅವರು ಹೊನ್ನವಳ್ಳಿ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ದೂರನ್ನು ನಾನೇ ಅವರ ವಿರುದ್ಧ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದೂರನ್ನು ನೀಡಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ನಾನು ಹಾಜರುಪಡಿಸಿರುವುದಿಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**